3.	ಮುದ್ದೇಬಿಹಾಳ್	40	39,00,309.00
4.	ಇಂಡಿ	75	74,87,263.00
5.	ಸಿಂದಗಿ	21	28,98,605.00
	ಒಟ್ಟು	**529**	**7,63,90,982.00**

ಆ) ದಿನಾಂಕ 24–05–06ರ ಸರ್ಕಾರಿ ಆದೇಶದಲ್ಲಿ ರೂ.69.10 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಕಾರ್ಯನಿರ್ವಹಿಸುತ್ತಿರುವ ಘಟಕಗಳಿಗೆ ಸಹಾಯಧನ ಬಿಡುಗಡೆ ಮಾಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಇ) ಉಳಿದ ಕೈಗಾರಿಕಾ ಘಟಕಗಳಿಗೆ ಸಹಾಯಧನವನ್ನು ಅನುದಾನ ಲಭ್ಯತೆಯ ಆಧಾರದ ಮೇಲೆ 2006–07 ಹಾಗೂ ನಂತರದ ಸಾಲಿನಲ್ಲಿ ಬಿಡುಗಡೆ ಮಾಡಲಾಗುವುದು.

ಈ) ರಾಜ್ಯ ಸರ್ಕಾರವು ವಿವಿಧ ಕೈಗಾರಿಕಾ ನೀತಿಗಳ ಅಡಿಯಲ್ಲಿ ಹಿಂದುಳಿದ ಪ್ರದೇಶಗಳಲ್ಲಿ ಸ್ಥಾಪಿಸಲಾಗುವ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕಾ ಘಟಕಗಳ ಯೋಜನೆಗೆ ಹೂಡಿದ ಒಟ್ಟು ಸ್ಥಿರ ಬಂಡವಾಳ ಅಂದರೆ ಭೂಮಿ, ಕಟ್ಟಡ ಮತ್ತು ಯಂತ್ರೋಪಕರಣಗಳ ಮೇಲೆ ನಿರ್ದಿಷ್ಟ ಶೇಕಡಾವಾರು ಸಹಾಯಧನವನ್ನು ಮಂಜೂರು ಮಾಡಲಾಗುತ್ತದೆ. ಸಾಮಾನ್ಯವಾಗಿ ಮಂಜೂರಾದ ಸಹಾಯಧನವನ್ನು ಅದೇ ಆರ್ಥಿಕ ವರ್ಷದೊಳಗೆ ಬಿಡುಗಡೆ ಮಾಡಲು ಸಾಧ್ಯವಾಗಲಿಲ್ಲ ಮತ್ತು ಇದರಿಂದಾಗಿ ಮಂಜೂರಾಗಿ ಬಿಡುಗಡೆಯಾಗದೆ ಇರುವ ಸಹಾಯಧನ ಪ್ರಮಾಣ ಹೆಚ್ಚುತ್ತಲೆ ಬಂದಿದೆ.

1081 (1500) ಶ್ರೀ ಸಿದ್ದು ಸಾವದಿ (ಜಮಖಂಡಿ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣಾ ಮೇಲ್ದಂಡೆ (ಆಲಮಟ್ಟಿ) ಯೋಜನೆಯಡಿ ನಡುಗಡ್ಡೆ ಜಮೀನುಗಳು ಜಮಖಂಡಿ ತಾಲ್ಲೂಕಿನಲ್ಲಿ ಮತ್ತು ಅಥಣಿ ತಾಲ್ಲೂಕಿನಲ್ಲಿ ಎಷ್ಟು ಎಕರೆ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ;

ಆ) ಇನ್ನೂ ಪರಿಹಾರ ಕೊಡದೇ ಮುಳುಗಡೆ ಆಗಿರುವ ನಡುಗಡ್ಡೆ ಜಮೀನು ಎಷ್ಟು ಎಕರೆ ಇರುವುದು;

ಇ) ಈ ಜಮೀನುಗಳಲ್ಲಿ ಪರಸ್ಪರ ಒಪ್ಪಿಗೆ ಪಡೆದು ಪರಿಹಾರ ವಿತರಿಸಿದ ಜಮೀನು ಎಷ್ಟು;

ಈ) ಒಪ್ಪಿಗೆ ಕೊಡದೇ ಇರುವ ಜಮೀನು ಎಷ್ಟು;

ಉ) ಪರಸ್ಪರ ಒಪ್ಪಿಗೆ ಕೊಡದೇ ಇರುವ ರೈತರಿಗೆ ಈವರೆಗೆ ಪರಿಹಾರ ಕೊಡದಿರಲು ಕಾರಣವೇನು;

ಊ) ಜನರಲ್ ಅವಾರ್ಡ್ ಮಾಡಲಿಕ್ಕೆ ಇರುವ ನಿಯಮಾವಳಿಗಳೇನು;

ಋ) ಪರಸ್ಪರ ಒಪ್ಪಿಗೆ ಕೊಟ್ಟಲ್ಲಿ ಮಾತ್ರ ಪರಿಹಾರ ಕೊಡಲಾಗುವುದು ಇಲ್ಲವಾದರೆ ಪರಿಹಾರ ಕೊಡದೆ ರದ್ದು ಮಾಡಲಾಗುವುದು ಎಂದು ನೋಟೀಸು ಕೊಟ್ಟಿರುವುದು ನಿಜವೇ;

ಎ) ಹಾಗಿದ್ದಲ್ಲಿ, ಯಾವ ಕಾನೂನಿನಡಿ ನೋಟೀಸ್ ನೀಡಲಾಗಿದೆ?

ಎ) ಈ ನೋಟೀಸಿನ ವಿರುದ್ಧ ಕೆಲವು ರೈತರು ಹೈಕೋರ್ಟಿಗೆ ಹೋಗಿ ಕೋರ್ಟಿನ ಆದೇಶದ ಪ್ರಕಾರ ಪರಿಹಾರ ಪಡೆಯಲು ಅರ್ಹರಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಐ) ಸದರಿ ಪ್ರಕಾರ ಎಲ್ಲಾ ರೈತರು ಹೈಕೋರ್ಟಿಗೆ ಹೋಗಿ ನಿರ್ದೇಶನ ತರಲು ಸಾಧ್ಯವಾಗದ ಕಾರಣ ಅವರ ಜಮೀನುಗಳಿಗೆ ಪರಿಹಾರ ಕೊಡಲಾಗುವುದೇ;

ಒ) ಒಂದು ವೇಳೆ ಕೊಡುವುದಾದಲ್ಲಿ ಯಾವಾಗ ಕೊಡಲಾಗುವುದು;

ಓ) ಕಾನೂನು ಬಾಹಿರವಾಗಿ ನೋಟೀಸ್ ನೀಡಿದ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಕೃಷ್ಣಾ ಮೇಲ್ದಂಡೆ ಯೋಜನೆಯಡಿ ನಡುಗಡ್ಡೆಯಾದ ಜಮೀನುಗಳ ವಿವರ:

1) ಜಮಖಂಡಿ ತಾಲ್ಲೂಕು –167.30 ಎಕರೆಗಳು

2) ಅಥಣಿ ತಾಲ್ಲೂಕು – 106.02 ಎಕರೆಗಳು

ಒಟ್ಟು 273.32 ಎಕರೆಗಳು

ಇವುಗಳಲ್ಲಿ ಈಗಾಗಲೆ 127.24 ಎಕರೆ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.

ಆ) ಭೂಸ್ವಾಧೀನಪಡಿಸಿಕೊಳ್ಳದೇ ಪರಿಹಾರ ನೀಡದೇ ಇರುವ ನಡುಗಡ್ಡೆ ಜಮೀನುಗಳ ವಿವರ ಈ ಕೆಳಕಂಡಂತಿದೆ :

1) ಜಮಖಂಡಿ ತಾಲ್ಲೂಕು – 71.24 ಎಕರೆಗಳು

2) ಅಥಣಿ ತಾಲ್ಲೂಕು – 74.24 ಎಕರೆಗಳು

ಒಟ್ಟು –146.08 ಎಕರೆಗಳು

ಇ) ಪರಸ್ಪರ ಒಪ್ಪಿಗೆ ಪಡೆದು ಪರಿಹಾರ ನೀಡಿದ ಜಮೀನುಗಳ ವಿವರ ಈ ಕೆಳಕಂಡಂತಿರುತ್ತದೆ:

1) ಜಮಖಂಡಿ ತಾಲ್ಲೂಕು –96.06 ಎಕರೆಗಳು

2) ಅಥಣಿ ತಾಲ್ಲೂಕು – 31.18 ಎಕರೆಗಳು

ಒಟ್ಟು 127.24 ಎಕರೆಗಳು

ಈ) ಒಪ್ಪಿಗೆ ಕೊಡದೇ ಇರುವ ಜಮೀನುಗಳ ವಿವರ:

1) ಜಮಖಂಡಿ ತಾಲ್ಲೂಕು – 71.24 ಎಕರೆಗಳು

2) ಅಥಣಿ ತಾಲ್ಲೂಕು – 74.24 ಎಕರೆಗಳು

ಒಟ್ಟು –146.08 ಎಕರೆಗಳು

ಉ) ಬಾಕಿ ಉಳಿದ ಜಮೀನುಗಳಿಗೆ ಸರ್ಕಾರಕ್ಕೆ ಆರ್ಥಿಕ ಹೊಣೆಯಾಗಬಾರದೆಂದು ಹಾಗೂ ರೈತರ ಹಿತದೃಷ್ಟಿಯಿಂದ ಪರಸ್ಪರ ಒಪ್ಪಿಗೆ ಪಡೆದುಕೊಳ್ಳಲು ರೈತರಿಗೆ ತಿಳುವಳಿಕೆ ಪತ್ರಗಳನ್ನು ನೀಡಲಾಗಿದೆ. ಮತ್ತು ಗ್ರಾಮಸಭೆಗಳನ್ನು ನಡೆಸಿ ರೈತರ ಮನ ಒಲಿಸುವ ಪ್ರಯತ್ನಿಸಲಾಗುತ್ತಿದ್ದು, ಇದರಂತೆ ಬಾಕಿ ಉಳಿದ ಜಮೀನುಗಳಿಗೆ ಪರಿಹಾರ ನೀಡಲು ವಿಳಂಬವಾಗಿರುತ್ತದೆ.

ಊ) ಭೂಸ್ವಾಧೀನ ಕಾಯ್ದೆ ಕಲಂ 11(1)ರಡಿಯಲ್ಲಿ ಸಾಮಾನ್ಯ ಐತೀರ್ಮ ಮಾಡಲು ಅವಕಾಶವಿರುತ್ತದೆ.

ಋ) ರೈತರ ಹಾಗೂ ಸರ್ಕಾರದ ಆರ್ಥಿಕ ಹಿತದೃಷ್ಟಿಯಿಂದ ಮತ್ತು ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸುವ ಸಲುವಾಗಿ ಒಪ್ಪಿಗೆ ಐತೀರ್ಪಿಗೆ ಸಹಕರಿಸಲು ತಿಳುವಳಿಕೆ ಪತ್ರವನ್ನು ನೀಡಲಾಗಿದೆ.

ಎ) ಭೂಸ್ವಾಧೀನ ಕಾಯ್ದೆ ಕಲಂ 11(2) ರಡಿ ಒಪ್ಪಿಗೆ ಐತೀರ್ಮ ರಚಿಸಲು ತಿಳುವಳಿಕೆ ಪತ್ರವನ್ನು ನೀಡಲು ಅವಕಾಶವಿರುತ್ತದೆ.

ಏ) ತಿಳಿದಿದೆ.

ಐ) ಮುಳುಗಡೆ ಜಮೀನುಗಳಿಗೆ ಸದರಿ ರೈತರು ಹೈಕೋರ್ಟಿನಿಂದ ನಿರ್ದೇಶನ ತರದಿದ್ದರೂ ಸಹ ಕಾನೂನು ರೀತ್ಯ ಪರಿಹಾರ ಧನ ವಿತರಿಸಲಾಗುವುದು.

ಒ) ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳಲು 3 ವರ್ಷಗಳ ಕಾಲಾವಕಾಶವಿರುವುದರಿಂದ ಈ ಅವಧಿಯೊಳಗೆ ಕ್ರಮ ಜರುಗಿಸಲಾಗುವುದು.

ಓ) ಕಾನೂನುಬಾಹಿರ ನೋಟೀಸ್‌ಗಳನ್ನು ನೀಡದೇ ಇರುವುದರಿಂದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

1082 (1527) ಶ್ರೀ ಎಂ. ಶ್ರೀನಿವಾಸ್ (ಮಂಡ್ಯ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿರುವ ಕೈಗಾರಿಕಾ ಪ್ರದೇಶಗಳೆಷ್ಟು? ಯಾವ ಯಾವ ತಾಲ್ಲೂಕುಗಳಲ್ಲಿ ಇವೆ?

ಆ) ಮಂಡ್ಯ ಜಿಲ್ಲೆ ಕೈಗಾರಿಕೆಯಲ್ಲಿ ಹಿಂದುಳಿದಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಇ) ಬಂದಿದ್ದಲ್ಲಿ ಅದನ್ನು ಪರಿಹರಿಸಲು ಸರ್ಕಾರ ಹೆಚ್ಚು ಕೈಗಾರಿಕೆಗಳನ್ನು ಸ್ಥಾಪಿಸಲು ಯೋಜಿಸಿದೆಯೇ?

ಈ) ಹಾಗಿದ್ದಲ್ಲಿ ಇದು ಸರ್ಕಾರದಲ್ಲಿ ಯಾವ ಹಂತದಲ್ಲಿದೆ, ಹಾಗೂ ಕೈಗಾರಿಕೆಗಳನ್ನು ಎಲ್ಲೆಲ್ಲಿ ಪ್ರಾರಂಭಿಸಲಾಗುವುದು. [ಪೂರ್ಣ ವಿವರ ನೀಡುವುದು];

ಉ) ಮಂಡ್ಯ ನಗರ ಪ್ರದೇಶದಲ್ಲಿರುವ ಕೈಗಾರಿಕಾ ಶೆಡ್ಡುಗಳೆಷ್ಟು?

ಊ) ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಶೆಡ್ಡುಗಳೆಷ್ಟು? [ಪೂರ್ಣ ವಿವರ ನೀಡುವುದು] ;

ಶ್ರೀ ಕಟ್ಟಾಸುಬ್ರಹ್ಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಮಂಡ್ಯ ಜಿಲ್ಲೆಯಲ್ಲಿ 2 ಕೈಗಾರಿಕಾ ಪ್ರದೇಶಗಳಿವೆ.

1. ಸೋಮನಹಳ್ಳಿ ಕೈಗಾರಿಕಾ ಪ್ರದೇಶ, ಮದ್ದೂರು.

2. ತೂಬಿನಕೆರೆ ಕೈಗಾರಿಕಾ ಪ್ರದೇಶ, ಮಂಡ್ಯ ತಾಲ್ಲೂಕು.

ಆ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಇ) ಹೌದು.